# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ02.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಎಂ.ಜಿ.ರೇಣುಕಯ್ಯ ಬಿನ್ ಲೇ.ಗುರುದೇವರು<br>70 ವರ್ಷ<br>ವ್ಯವಸಾಯ<br>ಮೂಗನಾಯಕನಕೋಟೆ |
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

## ಪಾಟೀ ಸವಾಲುಃ- ವಾದಿಗಳ ಪರ ವಕೀಲರಾದ ಶ್ರೀ. ಹೆಚ್.ಎಲ್.ಆರ್.ಎಸ್.ರವರಿಂದ

ದಾವಾಸ್ವತ್ತು ನನಗೆ ದಿಃ 09-02-1978 ರ ಪಾಲುಪಟ್ಟಿಯಂತೆ ನನ್ನ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ. ಸದರಿ ಪಾಲುಪಟ್ಟಿ ಆಗುವ ಕಾಲಕ್ಕೆ ನನ್ನ ವಯಸ್ಸು ಸುಮಾರು 35 ವರ್ಷ ಆಗಿತ್ತು. ಪ್ರತಿವಾದಿಗೆ ಆಗ ಸುಮಾರು 14 ವರ್ಷ ವಯಸ್ಸು ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಪಾಲುಪಟ್ಟಿ ಆಗುವ ಕಾಲಕ್ಕೆ ಪ್ರತಿವಾದಿ ಮೈನರ್ ಆಗಿದ್ದರು ಎನ್ನುತ್ತಾರೆ. ದಾವಾಸ್ವತ್ತಿನಲ್ಲಿ ನಾನು ಮನೆಕಟ್ಟಿಕೊಂಡು ವಾಸವಾಗಿದ್ದೇನೆ ಎಂದರೆ ಸರಿ. ನನ್ನ ಹಾಗೂ ಪ್ರತಿವಾದಿಯ ಜಮೀನಿನ ನಡುವೆ ಪೂರ್ವ - ಪಶ್ಚಿಮ ವಾಗಿ ಒಂದು ಬದುಇದೆ ಎಂದರೆ ಸರಿಯಲ್ಲ. ಪಾಲುಪಟ್ಟಿ ಆಗುವ ಕಾಲಕ್ಕೆ ದಾವಾಸ್ವತ್ತಿನಲ್ಲಿ ತೆಂಗಿನ ಮರಗಳು ಇದ್ದವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅರ್ಧ ಭಾಗದಲ್ಲಿ ತೆಂಗಿನ ಮರಗಳು ಇದ್ದವು ,ಇನ್ನರ್ಧ ಬೀಳುಪ್ರದೇಶ ಆಗಿತ್ತು ಎನ್ನುತ್ತಾರೆ. ದಾವಾಸ್ವತ್ತು ಹಾಗೂ ಪ್ರತಿವಾದಿಗೆ ಸೇರಿದ ಜಮೀನಿನಲ್ಲಿ ತೆಂಗಿನ ತೋಟ ಇದೆಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ದಾವಾಸ್ವತ್ತಿನಲ್ಲಿ ಅರ್ಧ ತೆಂಗಿನಮರಗಳಿದ್ದು ಇನ್ನರ್ದಕ್ಕೆ ಅಡಿಕೆಮರಗಳು ಇವೆ ಎನ್ನುತ್ತಾರೆ. ದಾವಾಸ್ವತ್ತಿನಲ್ಲಿರುವ ಅಡಿಕೆಮರಗಳನ್ನು ನಾನು ಇತ್ತಿಚೆಗೆ ನಾಟಿ ಮಾಡಿದ್ದೇನೆಎಂದರೆ ಸರಿಯಲ್ಲ.

2. ದಾವಾಸ್ವತ್ತಿನ ದಕ್ಷಿಣಕ್ಕಿರುವ ಪ್ರತಿವಾದಿ ಜಮೀನಿನಲ್ಲಿ ಬದುವಿನ ನಂತರ ಸಾಲಾಗಿ ಅಡಿಕೆ ಮರಗಳನ್ನು ಪ್ರತಿವಾದಿ ನೆಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಅವರ ಜಮೀನಿನಲ್ಲಿ ಒಂದು ಕೊಳವೆ ಬಾವಿಯನ್ನು ಸಹ ಕೊರೆಸಿದ್ದಾರೆ ಎಂದರೆ ಸರಿ. ಪ್ರತಿವಾದಿಯು ಸದರಿ ಕೊಳವೆ ಬಾವಿಯ ಮೋಟಾರ್ ಹಾಗೂ ಸ್ಟಾರ್ಟರ್ ಅನ್ನು ಆ ಬದುವಿನ ಪಕ್ಕದಲ್ಲಿ ಇಟ್ಟಿದ್ದಾರೆ ಎಂದರೆ ಸಾಕ್ಷಿಯು ಅವರ ಭಾಗದಲ್ಲಿ ಅವರು ಇಟ್ಟುಕೊಂಡಿದ್ದಾರೆ ಎನ್ನುತ್ತಾರೆ. ಸದರಿ ಬದು ನನ್ನ ದಾವಾಸ್ವತ್ತನ್ನು ಹಾಗೂ ಪ್ರತಿವಾದಿಗಳ ಜಮೀನನ್ನು ಬೇರ್ಪಡಿಸುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ದಾವಾಸ್ವತ್ತು ಹಾಗೂ ಬದುವಿನ ನಡುವೆ ಬದು ಇರುವುದಿಲ್ಲ, ಎರಡೂ ಜಮೀನು ಒಂದೇ ಇರುತ್ತದೆ ಎನ್ನುತ್ತಾರೆ. ದಾವಾಸ್ವತ್ತಿನಲ್ಲಿ ನೀರು ಹಾಯಿಸಲು ದಾವಾಸ್ವತ್ತಿನ ದಕ್ಷಿಣದಲ್ಲಿ ನಾನು ಒಂದು ಕಾಲುವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಕಾಲುವೆ ಇದ್ದರೂ ಸಹ ಮತ್ತು ನಾನು ಅದನ್ನು ನೀರು ಹಾಯಿಸಲು ಉಪಯೋಗಿಸುತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಾಲುವೆಯ ನಂತರ ದಕ್ಷಿಣ ದಿಕ್ಕಿನಲ್ಲಿ ಪ್ರತಿವಾದಿಯವರ ಜಮೀನು ಇದೆ ಎಂದರೆ ಸರಿ.

3. ನನ್ನ ತಂದೆ 1978 ರಲ್ಲಿ ವಿಭಾಗಮಾಡಿಕೊಟ್ಟಿದ್ದು, ನನ್ನ ಭಾಗಕ್ಕೆ ಬಂದ ಜಮೀನಿನಲ್ಲಿ ಆ ದಿನದಿಂದ ನಾನು ನನ್ನ ಸ್ವಾಧೀನದಲ್ಲಿ ಇದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಗೆ ಸದರಿ ಪಾಲುಪಟ್ಟಿಯಂತೆ ಅವರ ಭಾಗಕ್ಕೆ ಬಂದಿದ್ದ ಜಮೀನಿನಲ್ಲಿ ಅವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ವಿಭಾಗ ಆದಾಗಿನಿಂದ ಇಲ್ಲಿಯವರೆಗೂ ದಾವಾಸ್ವತ್ತಾಗಲೀ ಹಾಗೂ ಪ್ರತಿವಾದಿಯ ಸ್ವತ್ತಾಗಲೀ ಅಳತೆಯಾಗಿಲ್ಲ ಎಂದರೆ ಸರಿ. ದಿಃ03-02-2021 ರಂದು ದಾವಾಸ್ವತ್ತನ್ನು ಅಳತೆ ಮಾಡಲು ನಾನು ಸರ್ವೆಯರ್ ರವರಿಗೆ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ದಿಃ08-04-2021ರಂದು ಸರ್ವೆಯರ್ ರವರು ನನಗೊಬ್ಬನಿಗೆ ನೋಟೀಸ್ ಜಾರಿ ಮಾಡಿ ಅಳತೆ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನಗೂ ಹಾಗೂ ಪ್ರತಿವಾದಿ ಇಬ್ಬರಿಗೂ ನೋಟೀಸ್ ಜಾರಿಮಾಡಿದ್ದರು ಎನ್ನುತ್ತಾರೆ.

4. ನಿಮ್ಮ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಸರ್ವೆಯರ್ ರವರು ಅಳತೆ ಮಾಡಲು ಬಂದಾಗ ಪ್ರತಿವಾದಿ ಗಲಾಟೆ ಮಾಡಿದ್ದರು ಎಂದು ಬರೆಸಿದ್ದೀರಾ ಈ ವಿಚಾರವನ್ನು ನಿಮ್ಮ ವಾದಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲಾ ಬರೆಸಿಲ್ಲ ಎನ್ನುತ್ತಾ. ಸರ್ವೆಯರ್ ಅಳತೆ ಮಾಡಲು ಬಂದಾಗ ಮಹಜರ್ ಮಾಡಿಲ್ಲ ಎಂದರೆ ಸರಿ. ನಿ.ಪಿ.9 ರಲ್ಲಿ ನಾನು ಮಾತ್ರ ಸಹಿ ಮಾಡಿದ್ದೇನೆ ಪ್ರತಿವಾದಿಯಾಗಲೀ, ಅಕ್ಕಪಕ್ಕದ ಜಮೀನಿನ ಬಾಜುದಾರರಾಗಲೀ ಸಹಿ ಮಾಡಿಲ್ಲ ಎಂದರೆ ಪ್ರತಿವಾದಿ ಹಾಗೂ ಬಾಜುದಾರರು ನಿ.ಪಿ.9 ಕ್ಕೆ ಸಹಿ ಮಾಡಲು ನಿರಾಕರಿಸಿದರು ಎನ್ನುತ್ತಾರೆ. ಸರ್ವೆ ಮಾಡುವ ದಿನ ಪ್ರತಿವಾದಿ ಜಾಗದಲ್ಲಿ ಇಲ್ಲದ ಕಾರಣ ಅವರು ನೋಟೀಸ್ ಗೆ ಸಹಿ ಮಾಡಿಲ್ಲ ನಾನು ಅವರ ವಿರುದ್ಧ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಳತೆಮಾಡಲು ಕೊಟ್ಟ ಅರ್ಜಿಯನ್ನು ಸರ್ವೆ ಇಲಾಖೆಯವರು ವಿಲೇ ಇಟ್ಟಿದ್ದಾರೆ. ನಿ.ಪಿ 8 ರಲ್ಲಿ " **ಸದರಿ ದಿನಾಂಕದಂದು ಜಮೀನು ಬಳಿ ಹಾಜರಾಗಿ ಅಳತೆ ಮಾಡಿರುತ್ತಾರೆ ಸದರಿ ಸರ್ವೆ ನಂನಲ್ಲಿ ಪಕ್ಕದ ಪೋಡಿನವರು 7 ಗುಂಟೆ ಒತ್ತುವರಿ ಮಾಡಿದ್ದು ಎಂದು ಹೇಳಿಕೆ ಕೊಟ್ಟಿದ್ದೀರಿ** " ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪಕ್ಕದ ಹಿಸ್ಸೇದಾರರು ನನ್ನ ದಾವಾಸ್ವತತನ್ನು ಒತ್ತುವರಿ ಮಾಡಿಲ್ಲ ಎನ್ನುತ್ತಾರೆ. ನಿ.ಪಿ.8 ರಲ್ಲಿ ರುವ ಸಹಿ ನನ್ನದೇ ಎಂದರೆ ಸರಿ. ಸ ನಂಃ95/1 ರಲ್ಲಿ ನನ್ನ ದಾವಾಸ್ವತ್ತು , ಕಾವೇರಿ ನೀರಾವರಿ ನಿಗಮಕ್ಕೆ ಭೂಸ್ವಾಧೀನ ಆಗಿರುವ ಜಮೀನು ಹಾಗೂ ಪ್ರತಿವಾದಿಯ ಜಮೀನು ಇದೇ ಸ.ನಂಃ ನಲ್ಲಿ ಬರುತ್ತದೆಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ದಾವಾಸ್ವತುವ್ತ 95/1 ರಲ್ಲಿ ಬರುತ್ತದೆ , ನನ್ನ ಹಿಸ್ಸೆ ಭಾಗಕ್ಕೆ ಬಂದಿದ್ದ 95/1 ರ ಜಮೀನಿನಲ್ಲಿ ಸುಮಾರು 12 ಗುಂಟೆ ಜಮೀನು ಕಾವೇರಿ ನೀರಾವರಿ ನಿಗಮಕ್ಕೆ ಭೂಸ್ವಾಧೀನ ಆಗಿದ್ದು ಅದನ್ನು ನಾನು ಬಿಟ್ಟುಕೊಟ್ಟಿದ್ದೇನೆ ಎನ್ನುತ್ತಾರೆ. ಇಂದಿಗೂ ಸಹ ಪ್ರತಿವಾದಿಯ ಜಮೀನು ಕೂಡ ಸ.ನಂಃ95/1 ರಲ್ಲೇ ಇದೆ ಎಂದರೆ ಸರಿಯಲ್ಲ. ನಾನು ಸ.ನಂಃ95/1 ರಲ್ಲಿ 1 ಎಕರೆ 25 ಗುಂಟೆ ಜಮೀನಿನಲ್ಲಿ ( ದಾವಾಸ್ವತ್ತು ) ಸ್ವಾಧೀನಾನುಭವದಲ್ಲಿ ಇಲ್ಲ ಆ ಪೈಕಿ 7 ಗುಂಟೆ ಜಮೀನನ್ನು ಪಕ್ಕದ ಪೋಡಿನವರು ಒತ್ತುವರಿ ಮಾಡಿಕೊಂಡಿದ್ದಾರೆ ಎಂದರೆ ಸರಿ.

**ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಗುಬ್ಬಿ